ನೊಂದಣಿ ಸಂಖ್ಯೆ : ಯುಬಿಸಿ-3/98/ನೋಂದಣಿ/34547/2004- ದಿ.06-11-2004

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.**

ನಂ. 16, 1ನೇ ಮಹಡಿ, 1ನೇ ಅಡ್ಡ ರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560003

**KARNATAKA STATE CO-OPERATIVE CREDIT SOCIETIES FEDERATION LTD**

No. 16, 1st Floor, 1st Cross, Linkroad, Malleshwaram, Bangalore - 560 003.

Phone:080-23564444/23464033/23464034 E-Mail: ksccsfltd@gmail.com, info@ksccsf.org, www.ksccsf.org

ಶ್ರೀ ಸಿ.ಎಂ. ಮಾರೇಗೌಡ
ಅಧ್ಯಕ್ಷರು

ಡಾ|| ಸಂಜಯ್ ಪಿ. ಹೊಸಮಠ
ಉಪಾಧ್ಯಕ್ಷರು

**ನಿರ್ದೇಶಕರು**

ವಿ. ರಾಜು
ಶಿವರಾಜ್ ಬಿ. ಪಾಟೀಲ್
ಬಿ.ಡಿ. ಭೂಕಾಂತ್
ಗುರುರಾಜ್ ಹುಣಸಿಮರದ
ಎಂ.ಜಿ. ನರೇಂದ್ರ ಕುಮಾರ
ಕೆ.ಎಲ್. ಶಿವರಾಮು
ಕೆ. ಲಲಿತ
ಡಿ. ಚನ್ನಯ್ಯ
ಕೆ. ಕೃಷ್ಣಮೂರ್ತಿ
ಎನ್.ಬಿ. ರವೀಶಯ್ಯ
ಕೆ.ಕೆ. ಮಹೇಂದ್ರಪ್ರಸಾದ್ ಗೌಡ
ಜಿ. ಮಲ್ಲಿಕಾರ್ಜುನಯ್ಯ
ತಮ್ಮಣ್ಣ ಬಿ. ಕೆಂಚರಡ್ಡಿ
ಧರೆಪ್ಪ ಎಂ. ಅಲಗೂರ
ಗುರುಪಾದಪ್ಪಗೌಡ ಬಿ. ಪಾಟೀಲ
ಹೊನ್ನಯ್ಯ ವಿ. ಹಿರೇಮಠ
ಆಕಾಶ ಪಾಟೀಲ
ಪಿ.ಕೆ. ಜಯಕೃಷ್ಣೇಗೌಡ
ಕೆ. ನಾರಾಯಣ

ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)
ಶ್ರೀಮತಿ ಪಿ. ಆಶಾಲತಾ

ಉಲ್ಲೇಖ : ಕರಾಸಪಸಂಮ/ 1221 /2018-2019 ದಿನಾಂಕ : 8/1/2019

Karnataka State Co-Operative Credit Societies Federation Ltd ★ Bangalore

ಗೆ,
ಅಧ್ಯಕ್ಷರು/ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಗೆ
-------------------------------
-------------------------------
-------------------------------

ತಮ್ಮ ಗಮನಕ್ಕೆ ತರುವುದೇನೆಂದರೆ, ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿ., ಬೆಂಗಳೂರು ಇದರ ಅಧಿಕಾರಿಗಳು ಮಹಾಮಂಡಳದ ವತಿಯಿಂದ ಇ-ಸ್ಟಾಂಪಿಂಗ್ ಪರವಾನಗಿ ಪಡೆದ ಎಸಿಸಿ ಕೇಂದ್ರಗಳಿಗೆ ಭೇಟಿ ನೀಡಿ ಅಲ್ಲಿರುವ ನ್ಯೂನ್ಯತೆಗಳ ಬಗ್ಗೆ ಮಹಾಮಂಡಳದ ಗಮನಕ್ಕೆ ತಂದು ಅಂತಹ ಸಹಕಾರ ಸಂಘಗಳಿಗೆ ಮಂಜೂರಾಗಿರುವ ಇ-ಸ್ಟಾಂಪಿಂಗ್ ಉಪಕೇಂದ್ರಗಳನ್ನು ರದ್ದುಪಡಿಸುವಂತೆ ಸೂಚನೆ ನೀಡಿರುತ್ತಾರೆ. ಆದ್ದರಿಂದ ಇ-ಸ್ಟಾಂಪಿಂಗ್ ಉಪಕೇಂದ್ರಗಳ (ಸಬ್ ಎಸಿಸಿ) ಸದಸ್ಯ ಸಹಕಾರ ಸಂಘಗಳು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ.

1. ಇ-ಸ್ಟಾಂಪಿಂಗ್ ಸೇವಾಶುಲ್ಕದ ಬಗ್ಗೆ ಸಂಘದ ಕಛೇರಿ ಮುಂದೆ ಪ್ರಕಟಿಸಿರಬೇಕು. ರೂ.100/-ರವರೆಗಿನ ಇ-ಸ್ಟಾಂಪಿಂಗ್ ಸರ್ಟಿಫಿಕೇಟ್‌ಗೆ ರೂ.10/-, ರೂ.101/ರಿಂದ ರೂ.5000/-ವರೆಗಿನ ಇ-ಸ್ಟಾಂಪಿಂಗ್ ಸರ್ಟಿಫಿಕೇಟ್‌ಗೆ ರೂ.15/- ಸೇವಾಶುಲ್ಕ ಪಡೆಯಬೇಕು. ರೂ.5001/-ರಿಂದ ಮೇಲ್ಪಟ್ಟು ಇ-ಸ್ಟಾಂಪಿಂಗ್ ಸರ್ಟಿಫಿಕೇಟ್‌ಗೆ ಶೇ 0.001267ರಷ್ಟು ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿ., ನಿಂದ ಸೇವಾಶುಲ್ಕ ತಮ್ಮ ಸಂಘಕ್ಕೆ ಜಮಾ ಬರುತ್ತದೆ. ಆದುದರಿಂದ ರೂ.5000/- ರಿಂದ ಮೇಲ್ಪಟ್ಟು ಇ-ಸ್ಟಾಂಪಿಂಗ್‌ಗೆ ಸೇವಾಶುಲ್ಕ ಪಡೆಯುವಂತಿಲ್ಲ. ಈ ಎಲ್ಲಾ ಮಾಹಿತಿಗಳನ್ನು ಸಂಘದ ಸೂಚನಾಫಲಕದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

2. ಬ್ಯಾಂಕಿಗೆ ತುಂಬಿದ್ದ ಇ-ಸ್ಟಾಂಪಿಂಗ್ ಮುಂಗಡ ರೂ.100,000/-ಖರ್ಚಾಗುವುದಕ್ಕೆ ಮೊದಲೇ ಮತ್ತೇ ಕನಿಷ್ಠ ರೂ.25,000/-ಗಳ ಇ-ಸ್ಟಾಂಪಿಂಗ್ ಮುಂಗಡವನ್ನು ಐಡಿಬಿಐ ಬ್ಯಾಂಕ್ ಖಾತೆಗೆ ತುಂಬಬೇಕು. ಕಾಲಕಾಲಕ್ಕೆ ಹಣ ತುಂಬದೆ ಇ-ಸ್ಟಾಂಪ್‌ಗಳನ್ನು ಮುದ್ರಿಸಿದರೆ ಪಾಸ್‌ವರ್ಡ್ ಬ್ಲಾಕ್ ಆಗಿ ಕೆಲಸ ಸ್ಥಗಿತಗೊಳ್ಳುತ್ತದೆ. ಆದಕಾರಣ ಮುಂಗಡಕ್ಕಿಂತ ಹೆಚ್ಚಿನ ಮೊತ್ತದ ವ್ಯವಹಾರವನ್ನು ಮಾಡುವ ಮೊದಲು ಮುಂಗಡ ಮೊತ್ತವನ್ನು ಹೆಚ್ಚಿಸಿಕೊಳ್ಳುವುದು.

ಶ್ರೀ ಸಿ.ಎಂ. ಮಾರೇಗೌಡ
ಅಧ್ಯಕ್ಷರು

ಡಾ॥ ಸಂಜಯ್ ಪಿ. ಹೊಸಮಠ
ಉಪಾಧ್ಯಕ್ಷರು

**ನಿರ್ದೇಶಕರು**

ವಿ. ರಾಜು
ಶಿವರಾಜ್ ಬಿ. ಪಾಟೀಲ್
ಬಿ.ಡಿ. ಭೂಕಾಂತ್
ಗುರುರಾಜ್ ಹುಣಸಿಮರದ
ಎಂ.ಜೆ. ನರೇಂದ್ರ ಕುಮಾರ
ಕೆ.ಎಲ್. ಶಿವರಾಮು
ಕೆ. ಲಲಿತ
ಡಿ. ಚನ್ನಯ್ಯ
ಕೆ. ಕೃಷ್ಣಮೂರ್ತಿ
ಎನ್.ಬಿ. ರವೀಶಯ್ಯ
ಕೆ.ಕೆ. ಮಹೇಂದ್ರಪ್ರಸಾದ್ ಗೌಡ
ಜಿ. ಮಲ್ಲಿಕಾರ್ಜುನಯ್ಯ
ತಮ್ಮಣ್ಣ ಬಿ. ಕೆಂಚರಡ್ಡಿ
ಧರೇಪ್ಪ ಎಂ. ಅಲಗೂರ
ಗುರುಪಾದಪ್ಪಗೌಡ ಬ. ಪಾಟೀಲ
ಹೊನ್ನಯ್ಯ ವಿ. ಹಿರೇಮಠ
ಆಕಾಶ ಪಾಟೀಲ
ಪಿ.ಕೆ. ಜಯಕೃಷ್ಣೇಗೌಡ
ಕೆ. ನಾರಾಯಣ

ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)
ಶ್ರೀಮತಿ ಪಿ. ಆಶಾಲತಾ

ಉಲ್ಲೇಖ : ಕರಾಸಪಸಂಮ/ 1221 /2018 -2019 ದಿನಾಂಕ : 8/1/19

Karnataka State Co-operative Credit Societies Federation Ltd ★ Bangalore

3. ಯಾವ ಸಿಬ್ಬಂದಿಗಳ ಹೆಸರಿನಲ್ಲಿ ಇ-ಸ್ಟಾಂಪಿಂಗ್ ಮುದ್ರಿಸಲು ಪಾಸ್‌ವರ್ಡ್ ಮಂಜೂರಾಗಿರುತ್ತದೆಯೋ ಆ ಸಿಬ್ಬಂದಿಗಳೇ ತಮ್ಮ ತಮ್ಮ ಪಾಸ್‌ವರ್ಡ್ ಬಳಸಿ ಇ-ಸ್ಟಾಂಪ್‌ಗಳನ್ನು ಮುದ್ರಿಸಬೇಕು. ಪಾಸ್‌ವರ್ಡ್ ಮಂಜೂರಾಗಿರುವ ಸಿಬ್ಬಂದಿ ಕೆಲಸ ಬಿಟ್ಟಲ್ಲಿ ಅಥವಾ ಕೆಲಸದಿಂದ ವಜಾ ಮಾಡಿದಲ್ಲಿ ತಕ್ಷಣ ಮಹಾಮಂಡಳಕ್ಕೆ ವಿಷಯ ತಿಳಿಸಿ ಪಾಸ್‌ವರ್ಡ್ ಬ್ಲಾಕ್ ಮಾಡಲು ತಿಳಿಸುವುದು. ಆನಂತರ ಅರ್ಜಿ ಕೊಟ್ಟು ಬೇರೆ ಸಿಬ್ಬಂದಿ ಹೆಸರಿನಲ್ಲಿ ಪಾಸ್‌ವರ್ಡ್ ಮಂಜೂರು ಪಡೆಯುವುದು ಕಡ್ಡಾಯ.
4. ಇ-ಸ್ಟಾಂಪಿಂಗ್ ಪೇಪರ್ ನೀಡಲು ಹಣ ಸಂಗ್ರಹಿಸಿದ ಎಸಿಸಿ ಕೇಂದ್ರದ ಅಧಿಕಾರಿ (ಯೂಸರ್) ಗ್ರಾಹಕರು ಒದಗಿಸಿದ ಮಾಹಿತಿಯನ್ನು ಕಂಪ್ಯೂಟರಿಗೆ ದಾಖಲಿಸಬೇಕು ಮತ್ತು ಈ ದಾಖಲೆಗಳನ್ನು 03 ವರ್ಷಗಳ ಕಾಲ ಭದ್ರತೆಯಲ್ಲಿ ಸಂರಕ್ಷಿಸಿಡಬೇಕು.
5. ಕಂಪ್ಯೂಟರಿಗೆ ದಾಖಲಿಸಿದ ಮಾಹಿತಿ ಸರಿಯಿರುವ ಬಗ್ಗೆ ಕಂಪ್ಯೂಟರ್‌ನಿಂದ ಗ್ರಾಹಕರಿಗೆ ತೋರಿಸಿ ಗ್ರಾಹಕರಿಂದ ದೃಢೀಕರಿಸಿಕೊಳ್ಳಬೇಕು. ಪ್ರಿ ವ್ಯೂ (Pre view) ತೋರಿಸಿ ಸಹಿ ಪಡೆದುಕೊಳ್ಳಬೇಕು)
6. ಇ-ಸ್ಟಾಂಪಿಂಗ್ ಪೇಪರ್ ಪ್ರಿಂಟ್ ತೆಗೆಯುವಾಗ ಅಚಾತುರ್ಯದಿಂದ ತಪ್ಪಾದಲ್ಲಿ ಅಥವಾ ಪ್ರಿಂಟರ್‌ನಲ್ಲಿ ಪೇಪರ್ ಜ್ಯಾಮ್ ಆಗಿ ಪ್ರಿಂಟ್ ಬರದಿದ್ದರೆ ಅಥವಾ ಪ್ರಿಂಟ್ ಬರುವಾಗ ವಿದ್ಯುಚ್ಛಕ್ತಿ ನಿಂತುಹೋದರೆ ಇ-ಸ್ಟಾಂಪ್ ಮುದ್ರಣದ ಖರ್ಚು ಬಿದ್ದು ನಷ್ಟ ಸಂಭವಿಸುತ್ತದೆ. ಆದಕಾರಣ ಬಹಳ ಎಚ್ಚರಿಕೆಯಿಂದ ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿ., ಬೆಂಗಳೂರು ಹಾಗೂ ಮಹಾಮಂಡಳವು ಸೂಚಿಸಿರುವ ಪ್ರಿಂಟರ್ ಮತ್ತು ಒರಿಜಿನಲ್ HP ಕಾಟ್ರಿಡ್ಜ್‌ಗಳನ್ನು ಮಾತ್ರ ಬಳಸುವುದು ಅತ್ಯವಶ್ಯಕ.
7. ರೀಫಿಲ್ ಮಾಡಿದ ಕಾಟ್ರಿಡ್ಜ್ ಉಪಯೋಗಿಸಿ ಇ-ಸ್ಟಾಂಪ್ ಮುದ್ರಿಸಿದಲ್ಲಿ ನಿಮ್ಮ ಪಾಸ್‌ವರ್ಡ್ ಸ್ಥಗಿತಗೊಳಿಸಲಾಗುವುದು ಹಾಗೂ ನಿಮ್ಮ ಇ-ಸ್ಟಾಂಪಿಂಗ್ ಉಪಕೇಂದ್ರವನ್ನು ರದ್ದುಗೊಳಿಸಲು ಸೂಕ್ತ ಕ್ರಮವಿಡಲಾಗುವುದು. ಸಂಘದ ಇ-ಸ್ಟಾಂಪಿಂಗ್ ವ್ಯವಹಾರದ ಬಗ್ಗೆ ಮುಂದೆ ಕಾನೂನು ತೊಡಕು ಉಂಟಾದಲ್ಲಿ ಅದರ ಪೂರ್ಣ ಹೊಣೆಯನ್ನು ಸಂಘವೇ ಹೊರಬೇಕಾಗುತ್ತದೆ ಹಾಗೂ ಗ್ರಾಹಕರಿಗಾದ ನಷ್ಟವನ್ನು ಭರಿಸಬೇಕಾಗುತ್ತದೆ.

ನೊಂದಣಿ ಸಂಖ್ಯೆ : ಯುಬಿಸಿ-3/98/ನೋಂದಣಿ/34547/2004- ದಿ.06-11-2004

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ.

ನಂ. 16, 1ನೇ ಮಹಡಿ, 1ನೇ ಅಡ್ಡ ರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560003

**KARNATAKA STATE CO-OPERATIVE CREDIT SOCIETIES FEDERATION LTD**

No. 16, 1st Floor, 1st Cross, Linkroad, Malleshwaram, Bangalore - 560 003.

Phone:080-23564444/23464033/23464034 E-Mail: ksccsfltd@gmail.com, info@ksccsf.org, www.ksccsf.org

**ಶ್ರೀ ಸಿ.ಎಂ. ಮಾರೇಗೌಡ**
ಅಧ್ಯಕ್ಷರು

**ಡಾ|| ಸಂಜಯ್‌ಪಿ. ಹೊಸಮಠ**
ಉಪಾಧ್ಯಕ್ಷರು

**ನಿರ್ದೇಶಕರು**

ಬಿ. ರಾಜು
ಶಿವರಾಜ್ ಬಿ. ಪಾಟೀಲ್
ಬಿ.ಡಿ. ಭೂಕಾಂತ್
ಗುರುರಾಜ್ ಹುಣಸಿಮರದ
ಎಂ.ಜಿ. ನರೇಂದ್ರ ಕುಮಾರ
ಕೆ.ಎಲ್. ಶಿವರಾಮು
ಕೆ. ಲಲಿತ
ಡಿ. ಚನ್ನಯ್ಯ
ಕೆ. ಕೃಷ್ಣಮೂರ್ತಿ
ಎನ್.ಬಿ. ರವೀಶಯ್ಯ
ಕೆ.ಕೆ. ಮಹೇಂದ್ರಪ್ರಸಾದ್ ಗೌಡ
ಜಿ. ಮಲ್ಲಿಕಾರ್ಜುನಯ್ಯ
ತಮ್ಮಣ್ಣ ಬಿ. ಕೆಂಚರಡ್ಡಿ
ಧರೆಪ್ಪ ಎಂ. ಅಲಗೂರ
ಗುರುಪಾದಪ್ಪಗೌಡ ಬ. ಪಾಟೀಲ
ಹೊನ್ನಯ್ಯ ವಿ. ಹಿರೇಮಠ
ಆಕಾಶ ಪಾಟೀಲ
ಪಿ.ಕೆ. ಜಯಕೃಷ್ಣೇಗೌಡ
ಕೆ. ನಾರಾಯಣ

ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)
**ಶ್ರೀಮತಿ ಪಿ. ಆಶಾಲತಾ**

ಉಲ್ಲೇಖ : ಕರಾಸಪಸಂಮ/ 1221 /2018-2019 ದಿನಾಂಕ : 08/01/19

8. ಇಂಟರ್‌ನೆಟ್‌ನಲ್ಲಿ ತೊಂದರೆ ಉಂಟಾದಲ್ಲಿ ಆಗುವ ನಷ್ಟಕ್ಕೆ ಆಯಾಯ ಸಂಘಗಳೇ ಜವಾಬ್ದಾರರು.
9. ಇ-ಸ್ಟಾಂಪಿಂಗ್ ಪೇಪರ್‌ಗಳನ್ನು ಪ್ರಿಂಟ್ ತೆಗೆಯಲು 80-100 ಜಿಎಸ್‌ಎಂ ಎಕ್ಸಿಕ್ಯುಟಿವ್ ಬಾಂಡ್ ಪೇಪರನ್ನು ಕಡ್ಡಾಯವಾಗಿ ಉಪಯೋಗಿಸಬೇಕು.
10. ಇ-ಸ್ಟಾಂಪಿಂಗ್ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಸಿಸಿ ಕೇಂದ್ರದ ಅಧಿಕಾರಿಗಳು ಗ್ರಾಹಕರು ನೀಡುವ ಮಾಹಿತಿಯನ್ನು ನಿಗದಿತ ಅರ್ಜಿ ನಮೂನೆಯಲ್ಲಿ ಗ್ರಾಹಕರ ಪರವಾಗಿ ಸಿಬ್ಬಂದಿಗಳು ಭರ್ತಿ ಮಾಡಬಾರದು. ಗ್ರಾಹಕರಿಂದ ಭರ್ತಿ ಮಾಡಿಸಬೇಕು. ಗ್ರಾಹಕರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಸ್ಟಾಂಪ್ ಡ್ಯೂಟಿ & ಕಮೀಷನ್ ಮೊತ್ತ ನಮೂದಿಸಿರಬೇಕು.
11. ಎಸಿಸಿ ಕೇಂದ್ರವನ್ನು ಯಾವ ವಿಳಾಸದಲ್ಲಿ ಪ್ರಾರಂಭಿಸಲು ಅನುಮತಿ ಪಡೆದಿರುತ್ತಾರೊ ಆ ವಿಳಾಸದಲ್ಲೇ ಇ-ಸ್ಟಾಂಪಿಂಗ್ ಕೇಂದ್ರ ಪ್ರಾರಂಭಿಸಬೇಕು. ವಿಳಾಸವನ್ನು ಬದಲಾಯಿಸಲು ಮಹಾಮಂಡಳದ ಅನುಮತಿ ಪಡೆದು ಬದಲಾಯಿಸಬೇಕು. ಅನುಮತಿ ಇಲ್ಲದೇ ವಿಳಾಸ ಬದಲಾಯಿಸಿದರೆ ಅಂತಹ ಇ-ಸ್ಟಾಂಪಿಂಗ್ ಉಪಕೇಂದ್ರವನ್ನು (ಸಬ್ ಎಸಿಸಿ) ರದ್ದುಪಡಿಸಲಾಗುವುದು.
12. ಇ-ಸ್ಟಾಂಪಿಂಗ್ ಪೇಪರ್‌ನ್ನು ಯಾರು ಪಡೆದಿರುತ್ತಾರೊ ಯಾವ ಉದ್ದೇಶಕ್ಕಾಗಿ ಪಡೆದಿರುತ್ತಾರೊ ಅದೇ ಉದ್ದೇಶಕ್ಕೆ ಮತ್ತು ಅವರೇ ಉಪಯೋಗಿಸಬೇಕು ಎಂಬುದರ ಬಗ್ಗೆ ಗ್ರಾಹಕರಿಗೆ ತಿಳುವಳಿಕೆ ನೀಡಬೇಕು ಹಾಗೂ ಒಂದು ಸಾರಿ ಇ-ಸ್ಟಾಂಪ್ ಪೇಪರ್ ಮಾಡಿದ ನಂತರ ಅದರಲ್ಲಿ ಯಾವುದೇ ತಿದ್ದುಪಡಿ ಅಥವಾ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ ಮತ್ತು ದ್ವಿಪ್ರತಿಯನ್ನು ತೆಗೆಯಲು ಅವಕಾಶವಿರುವುದಿಲ್ಲ.
13. ಇ-ಸ್ಟಾಂಪಿಂಗ್ ಉಪಕೇಂದ್ರದ ಪರಿಶೀಲನೆಗೆ ಮಹಾಮಂಡಳದ ಅಧಿಕಾರಿಗಳು ಹಾಗೂ ಸ್ಟಾಕ್ ಹೋಲ್ಡಿಂಗ್‌ನ ಇ-ಸ್ಟಾಂಪಿಂಗ್ ಅಧಿಕಾರಿಗಳು ತಮ್ಮ ಕಛೇರಿಗೆ ಭೇಟಿ ನೀಡಿದಾಗ ಸಂಪೂರ್ಣವಾಗಿ ಸಹಕರಿಸಬೇಕು.

(ಆಶಾಲತಾ.ಪಿ)
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)